# “ಜನರ ನಾಲಿಗೆಗಳ ಮೇಲೆ....





ಸಾಹಿತ್ಯ ಗೋಷ್ಠಿಯೊಂದರಲ್ಲಿ ಬಿ.ಶಿವಮೂರ್ತಿಶಾಸ್ತ್ರಿ, ಪು.ತಿ.ನ., ವಿ.ಕೃ.ಗೋಕಾಕ್ ಅವರೊಂದಿಗೆ

**ಸಾಹಿತ್ಯದ ಬರವಣಿಗೆ ಶುರುವಾದದ್ದು ಯಾವಾಗ?**

ಅನಂತಪುರದಲ್ಲಿ ಇದ್ದ ದಿನಗಳಲ್ಲಿಯೇ ಬರವಣಿಗೆಯ ಅಭ್ಯಾಸವೂ ಶುರುವಾಯಿತು. ಕವಿತೆಗಳನ್ನು ಬರೆಯುತ್ತಿದ್ದೆ. ನನ್ನ ರಚನೆಗಳು ವಿ.ಕೃ.ಗೋಕಾಕರ ‘ಪ್ರಗತಿ’ ಪತ್ರಿಕೆಯಲ್ಲಿ ಅಚ್ಚಾಗುತ್ತಿದ್ದವು. ಅದೇ ಸಂದರ್ಭದಲ್ಲಿ ಕೆ.ವಿ. ಪುಟ್ಟಪ್ಪನವರ ‘ಸ್ವಾಮಿ ವಿವೇಕಾನಂದರು’ ಪುಸ್ತಕ ಓದಿದೆ. ಶಿಷ್ಯನೇ ಹೀಗಿದ್ದ ಮೇಲೆ ಗುರು ಹೇಗಿರಬೇಡ ಎಂದು ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯನ್ನೂ ಓದಿದೆ. ಕುವೆಂಪು ಅವರು ಅಧ್ಯಾತ್ಮದ ಮಾಸ್ಟರ್ ಕೀ ಅನ್ನು ನನಗೆ ಕೊಟ್ಟರು ಅನ್ನಿಸುತ್ತೆ. ಅಲ್ಲಿಗೆ ನಾನು ಕಮ್ಯುನಿಸ್ಟ್ ಆಗುವ ಅವಕಾಶ ಪೂರ್ತಿ ತಪ್ಪಿತು. ಆದರೆ ಕಮ್ಯುನಿಸ್ಟರ ಸಹವಾಸ ಇದ್ದೇ ಇತ್ತು. ಅವರೊಂದಿಗೆ ಇದ್ದರೂ ಅವರ ವಿಚಾರಧಾರೆಗಳನ್ನು ವಿರೋಧಿಸುತ್ತಿದ್ದೆ. ಪತ್ರಕರ್ತನಾಗಿಯೂ ಕೆಲಸ ಮಾಡಿದ್ದಿದೆ. 1948ರಿಂದ 1961ರವರೆಗೆ ‘ರೈತ’ ಎನ್ನುವ ವಾರ ಪತ್ರಿಕೆ ನಡೆಸಿದೆ.

**ನಿಮ್ಮ ವ್ಯಕ್ತಿತ್ವ-ವಿಚಾರಗಳ ಮೇಲೆ ಕುವೆಂಪು ಅವರ ಪ್ರಭಾವ ಯಾವ ರೀತಿಯದು?**

ಸಾಹಿತ್ಯ ಕ್ಷೇತ್ರದಲ್ಲಿ ಒಂದು ಗ್ರಹ ಹಿಡಿದಂತೆ ಕುವೆಂಪು ನನ್ನನ್ನು ಹಿಡಿದರು. ಧಾರ್ಮಿಕ ಕ್ಷೇತ್ರದಲ್ಲಿ ಪರಮಹಂಸ, ವಿವೇಕಾನಂದರು ನನ್ನನ್ನು ಹಿಡಿದರು. ಇವರೆಲ್ಲ ನನ್ನ ಬರವಣಿಗೆಗೆ ವಿಚಾರಗಳಿಗೆ ಪ್ರೇರಣೆಯಾದರು.

1939ರಲ್ಲಿ ಹರ್ಡೀಕರ್ ಮಂಜಪ್ಪನವರ ‘ಶರಣ ಸಂದೇಶ’ದಲ್ಲಿ ಸಾವರ್ಕರ್ ಬಗ್ಗೆ ಲೇಖನ ಓದಿ ಪ್ರಭಾವಿತನಾದೆ. ಆ ಲೇಖನದ ಪ್ರಭಾವದಿಂದಲೇ ‘ವೀರ ಸಾವರ್ಕರ್’ಗೆ ಎನ್ನುವ ಕವಿತೆ ಬರೆದೆ. ತೆಲುಗು ನೆಲ ಅನಂತಪುರದಲ್ಲಿ ಇದ್ದುಕೊಂಡು ಕನ್ನಡದಲ್ಲಿ ಬರೆಯುತ್ತಾನೆ ಎನ್ನುವ ಕಾರಣದಿಂದಲೋ ಏನೋ ನನ್ನ ಕವಿತೆಗಳು ಪತ್ರಿಕೆಗಳಲ್ಲಿ ಅಚ್ಚಾಗುತ್ತಿದ್ದವು (ನಗು). ಜೈಲಿನಲ್ಲಿದ್ದಾಗ ‘ಲೆಟರ್ಸ್ ಆಫ್ ವಿವೇಕಾನಂದ’ ಪುಸ್ತಕ ಅನುವಾದಿಸಿದೆ. ಆಗ ಸಾವರ್ಕರ್ ಸಾಹಸಗಳನ್ನು ಓದಿ ಕವಿತೆ ಬರೆದದ್ದು. ಆ ಬಳಿಕ ಹಿಂದುತ್ವದ ಪ್ರತಿಪಾದಕರ ಸ್ವಾತಂತ್ರ್ಯ ಹೋರಾಟದ ಒಳ ಆಸೆಗಳೆಲ್ಲ ನನಗೆ ಗೊತ್ತಾದವು.

**ಇತಿಹಾಸದ ವ್ಯಾಖ್ಯಾನದ ರೀತಿಗಳು ಈಚಿನ ದಿನಗಳಲ್ಲಿ ಬದಲಾಗುತ್ತಿರುವಂತಿದೆ. ಚರಿತ್ರೆಯ ವಿದ್ಯಾರ್ಥಿಯಾಗಿ ಈ ಬೆಳವಣಿಗೆಗಳನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ?**

ನೀವು ಟಿಪ್ಪುವಿನ ಬಗ್ಗೆ ಮಾತನಾಡುತ್ತಿದ್ದೀರಿ. ಆತ ಬ್ರಿಟಿಷ್ ಪ್ರಭುತ್ವಕ್ಕೆ ಪ್ರತಿರೋಧ ತೋರಿದ ಆಡಳಿತಗಾರ. ದಕ್ಷಿಣ ಭಾರತದ ರಾಜರುಗಳನ್ನು ಒಗ್ಗೂಡಿಸಿ ಬ್ರಿಟಿಷರ ವಿರುದ್ಧ ಹೋರಾಡಲು ಟಿಪ್ಪು ಪ್ರಯತ್ನಿಸಿದ. ಆದರೆ, ಟಿಪ್ಪು ಮುಸ್ಲಿಂ ಎನ್ನುವ ಕಾರಣಕ್ಕೆ ಯಾರೂ ಆತನನ್ನು ಬೆಂಬಲಿಸಲಿಲ್ಲ. ಟಿಪ್ಪು ವಿರುದ್ಧ ವ್ಯಾಪಕ ಅಪಪ್ರಚಾರ ನಡೆದಿದೆ.

**ಒಂದು ಭಾಷೆಯಾಗಿ ಕನ್ನಡದ ನಾಳೆಗಳು ಹೇಗಿರುತ್ತವೆ ಎಂದು ನಿಮಗನ್ನಿಸುತ್ತದೆ?**

ಎಲ್ಲಿಯವರೆಗೆ ಕನ್ನಡ ನುಡಿ ಜನರ ನಾಲಿಗೆಗಳ ಮೇಲೆ ಇರುತ್ತದೋ ಅಲ್ಲಿಯವರೆಗೆ ಅದಕ್ಕೆ ಅಪಾಯ ಇಲ್ಲ. ಕನ್ನಡದ ಉಳಿವಿಗಾಗಿ ಕನ್ನಡದ ಅಂಕಿ ಬಳಸುವಂಥ ಕ್ರಮಗಳಿಂದ ಯಾರಿಗೂ ಉಪಯೋಗವಿಲ್ಲ. ಶಾಲೇಲಿ ಕಲಿಸದ ಅಂಕಿಗಳನ್ನು ಮಕ್ಕಳು ಗುರ್ತಿಸುವುದಾದರೂ ಹೇಗೆ? ಯಾವುದೋ ಪೇಂಟರ್‌ಗೆ ಗುತ್ತಿಗೆ ಕೊಡಬೇಕಿತ್ತು, ಅದಕ್ಕಾಗಿ ಕನ್ನಡ ಅಂಕಿಗಳನ್ನು ಬರೆಸುತ್ತಾರೆ. ಇಂಥದು ಹೋಗಬೇಕು.

**ಸಮ್ಮೇಳನದ ಅಧ್ಯಕ್ಷರಾಗಿ ನಿಮ್ಮ ನಿರೀಕ್ಷೆಗಳೇನು?**

ಸಮ್ಮೇಳನದ ಅಧ್ಯಕ್ಷನಾಗಿ ಕನ್ನಡದ ಜಾಗೃತಿ ನನ್ನ ಆಶಯ. ನಮ್ಮ ಕಡೆ ದೊಂಬರು ಬರ್ತಾರೆ. ಗಣೆ ಕಟ್ತಾರೆ. ದೊಂಬರವನ ಹೆಂಡತಿ ಡೋಲು ಬಡೀತಾಳೆ. ಜನ ಸುತ್ತುವರೀತಾರೆ. ಸಣ್ಣ ಹುಡುಗಿಯೊಬ್ಬಳು ಅತ್ತಿಂದಿತ್ತ ಓಡಾಡುತ್ತಾಳೆ. ಅವನು ಗಣೆ ಹತ್ತುತ್ತಾನೆ. ಇಲ್ಲಿ ಡೋಲು ಬಡಿಯುವುದು ಗಮನ ಸೆಳೆಯಲಿಕ್ಕಾಗಿ. ಸಾಯಿಬಾಬಾ ಪವಾಡ ಮಾಡಿದ ರೀತಿಯಿದು. ಡೋಲು ಬಡಿದ ಮೇಲೆ ಗಣೆ ಹತ್ತಲೇಬೇಕು. ಈ ಕೆಲಸ ಕನ್ನಡ ಸಂದರ್ಭದಲ್ಲೂ ಆಗಬೇಕು.

ಈಗ ಜಾಗೃತಿ ಕೆಲಸ ಸಾಕಷ್ಟು ಆಗಿದೆ. ಭಾಷೆಯ ಶುದ್ಧೀಕರಣದ ಬಗ್ಗೆ ಚರ್ಚೆ ನಡೆಯಬೇಕು. ಭಾಷೆ ಬೆಳವಣಿಗೆಯ ಬಗ್ಗೆ ಸಮಗ್ರ ಚರ್ಚೆ ಆಗಬೇಕು. ಅದಕ್ಕಾಗಿ ಜನರನ್ನು ಈಗಲೂ ಕೂಡಿಸಬೇಕು. ಹೀಗೆ ಕೂಡಿಸುವ, ಡೋಲು ಬಾರಿಸುವ ಕೆಲಸವನ್ನು ಸಮ್ಮೇಳನಗಳು ಮಾಡುತ್ತಿವೆ. ಹತ್ತು ಕವಿಗಳು ಒಂದು ವರ್ಷದಲ್ಲಿ ನೂರು ಪುಸ್ತಕ ಬರೆದರೆ ಅವುಗಳು ಮಾರಾಟ ಆಗಲಿಕ್ಕೆ ಹತ್ತು ವರ್ಷ ಆಗಬೇಕು. ಅವುಗಳ ಸಂದೇಶ ಎಷ್ಟು ಜನರಿಗೆ ಮುಟ್ಟಿತು ಎಂದರೆ ಅದೂ ಕಡಿಮೆ ಸಂಖ್ಯೆಯೇ. ಆದರೆ ನಾಟಕ ಪ್ರದರ್ಶನ ಆದಾಗ ಸಂದೇಶ ಸಾರ್ವತ್ರಿಕ ಆಗುತ್ತದೆ. ಸಮ್ಮೇಳನಗಳು ಕೂಡ ಇಂಥ ಪ್ರದರ್ಶನಗಳ ರೀತಿಯಲ್ಲಿ ಕೆಲಸ ಮಾಡುತ್ತವೆ.

ಜನರ ಬದುಕು ಹಸನಾಗಬೇಕು. ನೆಮ್ಮದಿ ಸಿಗಬೇಕು. ಹೃದಯ ಸಂಸ್ಕಾರ ಹೆಚ್ಚಬೇಕು. ಪಶು ಪ್ರವೃತ್ತಿ ನೀಗಲು ಉತ್ತಮ ಸಾಹಿತ್ಯ ಸಹಕಾರಿ. ಇದನ್ನು ಸಮ್ಮೇಳನದ ಮೂಲಕ ಸಾಧಿಸಬೇಕು. ಇದೇ ಸಮ್ಮೇಳನದ ಉಪಯುಕ್ತತೆ.



ಪತ್ನಿ ಸರೋಜಮ್ಮ ಹಾಗೂ ಮಕ್ಕಳು ಮೊಮ್ಮಕ್ಕಳ ಕುಟುಂಬದ ಪರಿವಾರದೊಂದಿಗೆ